ಅವಳು ಮಕ್ಕಳಿಗೆ ಹಾಲು ಕುಡಿಸುವಾಗಲೂ, ನನ್ನ ಮೇಲೆ ಏನೋ ಕೃಪೆ ತೋರುತ್ತಿದ್ದಾಳೆ ಎಂದು ತಿಳಿಯುತ್ತಿದ್ದಳು. ನಿನಗೆ ದೇವರು ಕೊಟ್ಟ ಹೆಣ್ಣಿನ ಧರ್ಮವನ್ನು ಪಾಲಿಸುತ್ತಿದ್ದೀಯ, ನಾನೂ ಸಹ ದೇವರು ಕೊಟ್ಟ ನನ್ನ ಹೊಣೆಯನ್ನು ಪಾಲಿಸಿದ್ದೇನೆ ಎಂದು ಅವಳಿಗೆ ಹೇಳಿದೆ. ಅವಳು ನನಗೆ ಲೇಶಮಾತ್ರವೂ ಗೌರವವನ್ನು ಕೊಡುತ್ತಿರಲಿಲ್ಲ, ನನ್ನ ಬಗ್ಗೆ ಅವಳಿಗೆ ಯೋಚನೆಯೇ ಇರಲಿಲ್ಲ.

ನಮ್ಮ ವಿವಾಹ ಆಗ ತಾನೇ ಆಗಿತ್ತು. ಒಂದು ದಿನ ಬೆಳಿಗ್ಗೆ ಅವಳು ಕಾಲಿನ ಮೇಲೆ ಕಾಲಿಟ್ಟುಕೊಂಡು ಸೋಫಾದಲ್ಲಿ ಮಲಗಿ ಪತ್ರಿಕೆಯನ್ನು ಓದುತ್ತಿದ್ದಳು. ನನ್ನ ನೋಡಿ ಕೈಯಾಡಿಸುತ್ತಾ ಹೇಳಿದಳು, 'ರೀ... ಹೋಗಿ ನನಗೆ ಕಾಫಿ ತನ್ನಿ...' ಅವಳು ನನ್ನಲ್ಲಿ ಕ್ಷಮೆ ಯಾಚಿಸಿದಳು, ಈ ವಿಷಯ ಇರಲಿ... ನಾನು ಒಳ್ಳೊಳ್ಳೆಯ ಅಡುಗೆಯನ್ನು ಮಾಡುತ್ತೇನೆ, ಹೀಗಿರುವಾಗ ಒಂದು ಕಾಫಿ ಮಾಡುವುದು ದೊಡ್ಡ ವಿಷಯವಲ್ಲ. ಆದರೆ ಅವಳು ನನಗೆ ಆದೇಶಿಸಿದ ಆ ಭಂಗಿ... ನಾನು ಅವಳ ಅಡುಗೆ ಭಟ್ಟ ಎನ್ನುವಂತಿತ್ತು. ನಾನು ಗಟ್ಟಿಯಾಗಿ ನಗುತ್ತಾ, 'ಸರಿ... ತರುತ್ತೇನೆ' ಎಂದು ಹೇಳಿ ಅಲ್ಲಿಂದ ಜಾರಿಕೊಂಡೆ. ಮೊದಲು ಗಾಲ್ಫ್ ಕೋರ್ಸ್‌ಗೆ ಹೋಗಿ ಒಂದೂವರೆ ಗಂಟೆ ಗಾಲ್ಫ್ ಆಡಿದೆ, ನಂತರ ರೆಸ್ಟೋರೆಂಟಿಗೆ ಹೋಗಿ ಒಳ್ಳೆಯ ತಿಂಡಿ ತಿಂದೆ. ನನ್ನ ಸ್ನೇಹಿತನೊಬ್ಬ ತನ್ನ ಮನೆಯನ್ನು ಬದಲಾಯಿಸುತ್ತಿದ್ದ, ಅವನಿಗೆ ಸಹಾಯ ಮಾಡಿದೆ. ಕಡೆಗೆ ಥಿಯೇಟರ್‌ಗೆ ಹೋಗಿ ಆರಾಮವಾಗಿ ಕೂತು ಸಿನಿಮಾ ನೋಡಿದೆ. ರಾತ್ರಿ ಒಂದು ಗಂಟೆಗೆ ಮನೆಗೆ ಬಂದೆ. ಸೌಂದ್ರಾಳ ಮುಖ ಬೆಂಕಿಯಂತೆ ಉರಿಯುತ್ತಿತ್ತು, ನನ್ನನ್ನು ನೋಡಿದೊಡನೆಯೇ ಕಿರುಚಿದಳು,

'ಪಾಲ್!... ಎಲ್ಲಿಗೆ ಹೋಗಿದ್ದಿರಿ?' ನಂತರ ಬಂದು ನನ್ನನ್ನು ತಬ್ಬಿಕೊಂಡಳು, ನನ್ನೆದೆಗೆ ತನ್ನ ತಲೆ ಊರಿ ನಿಂತಳು, ಅವಳ ಉಸಿರಾಟ ಕ್ರಮೇಣ ಸುಧಾರಿಸಿತು, 'ನೀವು ಕಾಣೆಯಾಗಿದ್ದೀರಿ ಎಂದು ರಿಪೋರ್ಟ್ ಬರೆಸಲು ಪೊಲೀಸ್ ಸ್ಟೇಷನ್‌ಗೆ ಹೋಗಿದ್ದೆ.'

ಆ ದಿನಗಳಲ್ಲಿ ಸೆಲ್ ಫೋನ್‌ಗಳಿರಲಿಲ್ಲ.

'ಪೊಲೀಸರು ರಿಪೋರ್ಟ್ ಬರೆದುಕೊಂಡರಾ?' ಕೇಳಿದೆ. 'ಇಲ್ಲ. ಅವರು ವಯಸ್ಕರು, ತಮ್ಮಿಚ್ಛೆಯಂತೆ ಅವರು ಎಲ್ಲಿಗೆ ಬೇಕಾದರು ಹೋಗಬಹುದು, ಒಂದು ವೇಳೆ ಎರಡು ದಿನದ ನಂತರವೂ ಬರದಿದ್ದರೆ, ಆಗ ಬನ್ನಿ; ರಿಪೋರ್ಟ್ ಬರೆದುಕೊಳ್ಳೀನಿ ಎಂದರು.'

ನಾನು ಮೆಲ್ಲಮೆಲ್ಲನೆ ಮುಗುಳ್ನಕ್ಕೆ.

'ಎಲ್ಲಿಗೆ ಹೋಗಿದ್ದಿರಿ?' ಅವಳ ಧ್ವನಿಯಲ್ಲಿ ಭಯವಿತ್ತು.

'ನಿನಗಾಗಿ ಕಾಫಿ ತರಲು' ನಾನು ಕಠೋರವಾಗಿ ಹೇಳಿದೆ. ತದನಂತರದಲ್ಲಿ ಅವಳೆಂದೂ ನನಗೆ ಕಾಫಿ ಮಾಡಲು ಹೇಳಲಿಲ್ಲ.

ಮಕ್ಕಳಾದ ನಂತರ ಎಲ್ಲವೂ ಹದಗೆಟ್ಟಿತು. ಎರಡು ಹೊಸ ಮಕ್ಕಳು ಈ ಜಗತ್ತಿಗೆ ಬಂದವು. ಅವುಗಳನ್ನು ಹೇಗೆ ಪಾಲಿಸುವುದು ಎಂದು ತಂದೆ ತಾಯಿಗೆ ತಿಳಿದಿರಲಿಲ್ಲ. ಅವು ಸದಾ ಅಳುತ್ತಿದ್ದವು. ಅವುಗಳ ತಾಯಿ ರೇಗುತ್ತಿದ್ದಳು. ಸೌಂದ್ರಾ ಇನ್ನಷ್ಟು ಮುಂಗೋಪಿಯಾದಳು. ಅವಳ ವರ್ತನೆ ವಿಚಿತ್ರವಾಯಿತು, ಅದು ಹಿಂಸೆಯ ರೂಪವನ್ನು ತಾಳಿತು. ಅವಳಿಂದ ಹಾಲು ಮತ್ತು ಮೂತ್ರ ಬೆರೆತ ದುರ್ಗಂಧ ಬರುತ್ತಿತ್ತು. ಸ್ನಾನ ಮಾಡು ಎಂದರೆ ನನ್ನ ಮಾತನ್ನೇ ಕೇಳುತ್ತಿರಲಿಲ್ಲ. ನಮ್ಮ ನಡುವೆ ಯಾವುದಾದರೂ ವಿಷಯದ ಬಗ್ಗೆ ಚರ್ಚೆ ಪ್ರಾರಂಭವಾದರೆ ಎಲ್ಲಾ ವಸ್ತುಗಳನ್ನು ನೆಲಕ್ಕೆ ಎಸೆಯುತ್ತಿದ್ದಳು, ನನ್ನನ್ನು ನಿರಂತರವಾಗಿ ಹಳಿಯುತ್ತಿದ್ದಳು. ನಾನು ಅವಳ ಬಾಯಿಯಿಂದ ಕೆಟ್ಟ, ಹೊಲಸು ಬೈಗುಳಗಳನ್ನು ಕೇಳಿದೆ. ಅದನ್ನು ನಾನು ಯಾರಿಗೂ ಹೇಳುವಂತಿರಲಿಲ್ಲ.

ಸೌಂದ್ರಾ ತನಗೆ ಪೋಸ್ಟ್‌ನ್ಯಾಟಲ್ ಡಿಪ್ರೆಷನ್ ಆಗಿದೆ ಎಂದು ಹೇಳುತ್ತಿದ್ದಳು. ಮಹಿಳೆಯರಿಗೆ ಏನೇನಾಗುವುದೋ ಎಂದು ನಾನು ವಟಗುಟ್ಟುತ್ತಿದ್ದೆ. ಪ್ರತಿಕ್ಷಣ ನಮ್ಮ ನಡುವೆ ಯುದ್ಧದ ವಾತಾವರಣವಿರುತ್ತಿತ್ತು. ನನ್ನ ತಾಳ್ಮೆ ಹದಗೆಟ್ಟಿತ್ತು. ಅಂದು ನಾನು ಕಠಿಣ ತೀರ್ಮಾನವನ್ನು ಕೈಗೊಂಡಿದ್ದೆ. ಅವಳು ಹನ್ನೊಂದು ಗಂಟೆಗೆ ಮಲಗಿ ಎದ್ದಿದ್ದಳು. ನಾನೊಂದು ರಿಪೋರ್ಟಿನ ಪ್ರೂಫ್ ರೀಡಿಂಗ್‌ನಲ್ಲಿ ಮಗ್ನನಾಗಿದ್ದೆ. ಆದರೂ ಅವಳು ಏಳುವುದನ್ನು ನೋಡಿ ತಕ್ಷಣ ಹೋಗಿ ಚಹಾ ತಯಾರಿಸಿ ಅವಳಿಗೆ ತಂದು ಕೊಟ್ಟೆ. ಅವಳೂ ನನಗೆ ಪ್ರೀತಿಯಿಂದ ಹೇಳಿದಳು, 'ಪಾಲ್, ಇಂದು ನಾನು ನಿಮಗಾಗಿ ಒಂದು ಒಳ್ಳೆಯ ಲಂಚ್ ತಯಾರಿಸುತ್ತೇನೆ'. ನಂತರ ಅದಕ್ಕಾಗಿ ಸಿದ್ಧತೆಯನ್ನೂ ಮಾಡಲಾರಂಭಿಸಿದಳು.

'ಮೊದಲು ಚಹಾ ಕುಡಿ' ಎಂದೆ.

ಅವಳು ನನ್ನೆದುರು ಕೂತು ಚಹಾವನ್ನು ಗುಟುಕರಿಸುತ್ತಾ ತನ್ನ ದುಃಖವನ್ನು ಹೇಳಿದಳು, 'ಮಕ್ಕಳು ರಾತ್ರಿಯೆಲ್ಲಾ ನನಗೆ ನಿದ್ರೆ ಮಾಡಲು ಬಿಡುವುದಿಲ್ಲ'.

ನಾನು ನನ್ನ ಪ್ರೂಫ್‌ರೀಡಿಂಗ್ ಕೆಲಸವನ್ನು ಮತ್ತೆ ಮುಂದುವರೆಸಿ, ಅದರಲ್ಲಿ ಮಗ್ನನಾಗಿದ್ದೆ. ಅವಳು ಇದ್ದಕ್ಕಿದ್ದಂತೆ ದೂರುವ ಧ್ವನಿಯಲ್ಲಿ ಹೇಳಿದಳು, 'ನಾನಿಲ್ಲಿ ನಿಮ್ಮೆದುರು ಕೂತು ನಿಮ್ಮ ಹತ್ರ ಮಾತಾಡ್ತಿದ್ದೇನೆ. ನನ್ನ ಮಾತನ್ನು ಕೇಳುವುದಕ್ಕೆ ಬದಲಾಗಿ ನೀವು ನಿಮ್ಮ ಕೆಲಸದಲ್ಲಿ ಮೈಮರೆತಿದ್ದೀರಿ.'

'ಏನು ಕೇಳೋದು, ನಿತ್ಯ ಅದೇ ಮಾತುಗಳು...'

'ನಿಮಗೆ ನಿಮ್ಮ ಮಕ್ಕಳ ಬಗ್ಗೆ ಕಾಳಜಿಯೇ ಇಲ್ಲ...'

'ನಾನು ಈ ಪ್ರೂಫ್‌ರೀಡಿಂಗ್ ಕೆಲಸವನ್ನು ಮುಗಿಸಿ ಇವತ್ತೇ ಕಂಪನಿಗೆ ಕಳುಹಿಸಬೇಕಿದೆ. ನಾನು ಹತ್ತು ಕಡೆಗೆ ಗಮನ ಕೊಡಬೇಕಾಗುತ್ತೆ. ನಿನ್ನ ಹಾಗೆ ನಾನು ಹಾಸಿಗೆಯಲ್ಲಿ ಮಲಗಿರಲ್ಲ.'

'ಏನಂದ್ರಿ, ನಾನು ಹಾಸಿಗೆಯಲ್ಲಿ ಮಲಗಿರ್ತೀನ...? ನಾನು ಎರಡೆರಡು ಮಕ್ಕಳನ್ನು ಹೆತ್ತಿದ್ದೇನೆ'.

'ಅದೇನು ದೊಡ್ಡ ಕೆಲಸ ಮಾಡಿದೆ? ಎಲ್ಲಾ ಮಹಿಳೆಯರೂ ಮಕ್ಕಳನ್ನು ಹೆರುತ್ತಾರೆ. ನೀನು ಒಂದೇ ಬಾರಿಗೆ, ಒಂದು ಮಗುವಿನ ಬದಲು ಎರಡು ಮಕ್ಕಳನ್ನು ಹೆತ್ತಿದ್ದೀಯ; ನನ್ನ ಮೇಲೇ ಜವಾಬ್ದಾರಿಯನ್ನು ಸಹ ಹಾಕಿದೆ.'

ನಾನು ಈ ಮಾತನ್ನು ತಮಾಷೆಯಲ್ಲಿ ಹೇಳಿದ್ದೆ, ಅವಳು ರೇಗುತ್ತಾ ಚಹಾದ ಬಟ್ಟಲನ್ನು ನೆಲಕ್ಕೆ ಬಡಿದಳು. ಪಿಂಗಾಣಿ ಬಟ್ಟಲು ಚೂರು ಚೂರಾಗಿ ಚಹಾ ನೆಲದ ಮೇಲೆಲ್ಲಾ ಹರಡಿತು.

'ಓಹೋ... ನೀನೊಬ್ಬಳೇ ವಸ್ತುಗಳನ್ನು ಎಸೆಯಲು ಸಾಧ್ಯ ಅಂತ ತಿಳಿದಿದ್ದೀಯ! ಈಗ ನೋಡು...' ಎನ್ನುತ್ತಾ ನಾನೂ ಸಹ ನನ್ನ ಚಹಾ ಬಟ್ಟಲನ್ನು ನೆಲಕ್ಕೆ ಬಡಿದೆ. ಅದೂ ಸಹ ಚೂರುಚೂರಾಯಿತು. ನಂತರ ಒಂದು ದುಬಾರಿ ಹೂದಾನಿ, ಮೂರ್ನಾಲ್ಕು ವಸ್ತುಗಳು ಕೈಗೆ ಸಿಕ್ಕಿದವು, ಅವುಗಳನ್ನೂ ನೆಲಕ್ಕೆ ಬಡಿದೆ. ನೆಲದ ಮೇಲೆ ಗಾಜಿನ ಚಿಕ್ಕಚಿಕ್ಕ ತುಂಡುಗಳು ಚೆಲ್ಲಾಪಿಲ್ಲಿಯಾಗಿ ಹರಡಿಬಿದ್ದವು. ಅವಳೂ ನನ್ನನ್ನು ನಿಂದಿಸುತ್ತಿದ್ದಳು, ನಾನೂ ಸಹ ಸುಮ್ಮನಿರಲಿಲ್ಲ. ಪರಸ್ಪರ ಇಬ್ಬರೂ ನಿಂದಿಸಿಕೊಳ್ಳುತ್ತಿದ್ದೆವು. ಎಷ್ಟು ಕೆಟ್ಟದ್ದಾಗಿ ನಿಂದಿಸಲು ಸಾಧ್ಯವೋ, ಅಷ್ಟು ಕೆಟ್ಟದ್ದಾಗಿ ನಿಂದಿಸಿಕೊಳ್ಳುತ್ತಿದ್ದೆವು. ಬೆಡ್‌ರೂಮಿನಲ್ಲಿ ನಿದ್ರಿಸುತ್ತಿದ್ದ ಮಕ್ಕಳು ಎದ್ದು ತಮ್ಮದೇ ರಾಗ ತೆಗೆದರು. ನಾನು ಚಪ್ಪಲಿಗಳನ್ನು ಮೆಟ್ಟಿಕೊಂಡು ಮನೆಯಿಂದ ಹೊರಹೋದೆ.

ಬದುಕು ಕಷ್ಟವಾಗಿತ್ತು. ನಾನು ಈ ಜಂಜಾಟದಿಂದ ಬೇಸತ್ತು ಹೋಗಿದ್ದೆ. ನನ್ನ ಮನೆ ನರಕವಾಗಿತ್ತು. ಈ ನರಕದಿಂದ ಹೊರಬರಲು ಚಡಪಡಿಸುತ್ತಿದ್ದೆ. ನಾನು ಸೌಂದ್ರಾಳಿಗೆ ಏನೂ ಹೇಳಲಿಲ್ಲ. ನಾನು ಮೂರು ಗಂಟೆಯ ನಂತರ ಮನೆಗೆ ಬಂದಾಗ ಸೌಂದ್ರಾ ಬೆಡ್‌ರೂಮಿನಲ್ಲಿ ಇಬ್ಬರು ಮಕ್ಕಳೊಂದಿಗೆ ನಿದ್ರಿಸುತ್ತಿದ್ದಳು. ನಾನು ಸದ್ದು ಮಾಡದೆ ನನ್ನ ವಸ್ತುಗಳನ್ನು ಪ್ಯಾಕ್ ಮಾಡಿದೆ, ನನ್ನೆಲ್ಲಾ ವಸ್ತುಗಳೊಂದಿಗೆ ಅಲ್ಲಿಂದ ಜಾರಿಕೊಂಡೆ. ಅವಳಿಗೆ ನಾನು ಹೋದ ಸುಳಿವೂ ಸಿಗಲಿಲ್ಲ. ನಾನು ಅವಳಿಗಾಗಿ ಡೈನಿಂಗ್ ಟೇಬಲ್ ಮೇಲೆ ಒಂದು ನೋಟ್ ಬರೆದಿಟ್ಟಿದ್ದೆ, 'ಸೌಂದ್ರಾ, ನಾವು ಒಟ್ಟಿಗೆ ಇರುವುದು ಅಸಾಧ್ಯ. ನಾನು ಹೋಗುತ್ತಿದ್ದೇನೆ... ಪಾಲ್.'

ಅನೇಕ ಜನರು, ನಾನು ಪರಿಸ್ಥಿತಿಗಳಿಂದ ಪಲಾಯನಗೈದೆ, ಪರಿಸ್ಥಿತಿಗಳನ್ನು ಎದುರಿಸಲಿಲ್ಲ, ನಾನು ಹೇಡಿ ಎಂದೆಲ್ಲಾ ಆರೋಪ ಹೊರಿಸಿದರು. ಆದರೆ ನಾನು ಸೌಂದ್ರಾಳಿಂದ ಓಡಿ ಹೋಗಿರಲಿಲ್ಲ, ಮುಕ್ತನಾಗಿದ್ದೆ ಅಷ್ಟೆ. ಬದಲಾಗಿ ಅವಳನ್ನೂ ಮುಕ್ತಗೊಳಿಸಿದ್ದೆ. ಕೆಲವೊಮ್ಮೆ ಒಬ್ಬರಿಂದ ದೂರ ಹೋಗುವುದು ಮತ್ತು ಪರಿಸ್ಥಿತಿಗಳಿಂದ ಪಲಾಯನಗೈಯುವುದು ದೌರ್ಬಲ್ಯವಲ್ಲ, ಶಕ್ತಿಯಾಗುತ್ತದೆ. ನಮ್ಮ ಉದ್ದೇಶ, ಯಾರಿಗೂ ನಮ್ಮ ಅಹಂಕಾರ ತೋರಿಸುವುದಾಗಿರಲಿಲ್ಲ, ಪ್ರತಿಯಾಗಿ ನಮಗೇ ನಮ್ಮ ಅಹಂಕಾರದ ಆಭಾಸವಾಗುತ್ತದೆ. ನಾವು ವಿಚ್ಛೇದನಕ್ಕಾಗಿ ಕಟಕಟೆಯಲ್ಲಿ ನಿಂತಾಗ ಅವಳ ವಕೀಲರು ಪರಿಣಾಮಕಾರಿಯಾಗಿ ಹಾಗೂ ಸ್ಪಷ್ಟವಾಗಿ ನ್ಯಾಯಾಧೀಶರೆದುರು ಮೊಕದ್ದಮೆಯ ರೂಪುರೇಷೆಗಳನ್ನು ಪ್ರಸ್ತುತಪಡಿಸಿದರು, 'ಮೈ ಲಾರ್ಡ್, ಇದೊಂದು ದುಃಖದ ಮತ್ತು ವಿಷಾದದ ಕೇಸ್ ಆಗಿದೆ. ಒಬ್ಬ ಮಹಿಳೆಗೆ ತಾಯಿಯಾಗುವುದು ಶಾಪವಾಯಿತು.' ನಾನು ಆರೋಪ ಕೇಳಿ ಅವಾಕ್ಕಾದೆ. (ಸಶೇಷ)